# ಕುಟುಂಬದ ಭದ್ರತೆಗೆ ಅತ್ಯವಶ್ಯ ಎಸ್‌ಬಿಐ ಅಪಘಾತ ವಿಮೆ

State Bank of India

ಜಗತ್ತು ವೇಗವಾಗಿ ಮುನ್ನಡೆಯುತ್ತಿದೆ. ಇಡೀ ವಾತಾವರಣವೇ ಸರಸರನೇ ಹೆಜ್ಜೆ ಹಾಕಿ ಅತ್ಯಂತ ವೇಗವಾಗಿ ಸಾಗುತ್ತಿದೆ. ಇಂತಹ ಸಮಯದಲ್ಲಿ ಆಮೆವೇಗದಲ್ಲಿ ಸಾಗಿದರೆ ನಮ್ಮ ಜತೆಗಿರುವವರು ನಮಗಿಂತ ಮುಂದಕ್ಕೆ ಹೋಗಿ ಬಿಟ್ಟಿರುತ್ತಾರೆ. ಹಾಗಾಗಿ, ಶರವೇಗವೇ ಇಂದಿನ ವಿದ್ಯಾಮಾನಕ್ಕೆ ಸೂಕ್ತ ಮದ್ದೆಂದು ಎಲ್ಲರೂ ಭಾವಿಸಿದ್ದಾರೆ. ಇದರಿಂದ ಹೊರಗೆ ಕಾಲಿಟ್ಟವರ ಬದುಕು 'ಇದಮಿತ್ತಂ' ಎಂದು ಹೇಳುವುದು ಕಷ್ಟವಾಗಿದೆ. ದಿನಂಪ್ರತಿ ಪತ್ರಿಕೆಗಳಲ್ಲಿ ವರದಿಯಾಗುವ ಅಪಘಾತಗಳನ್ನು ಕೇಳಿದರಂತೂ ಒಂದರೆಕ್ಷಣ ತಬ್ಬಿಬ್ಬಾಗುವುದು ನಿಶ್ಚಿತ. ನಾವು ಸರಿಯಾದ ಪಥದಲ್ಲಿ ನಿಗದಿತ ವೇಗದಲ್ಲೇ ಹೋಗುತ್ತಿದ್ದರೂ ಎದುರಿನಿಂದ ಇಂದಿನಿಂದ ಎಡ– ಬಲದಲ್ಲಿ ಬರುವ ವಾಹನಗಳು ಸರಿಯಾಗಿ ಬರುತ್ತಿವೆ ಎಂದು ಹೇಳಲಾಗದು. ಮೈಯೆಲ್ಲಾ ಕಣ್ಣಾಗಿದ್ದರೂ ಅಪಘಾತದ ಸಂಭವ ಅಧಿಕವಾಗುತ್ತಲೇ ಇದೆ. ಕೇವಲ ರಸ್ತೆ ಮಾತ್ರವಲ್ಲ ರೈಲು ಸಹ ಇದಕ್ಕೆ ಹೊರತಾಗಿಲ್ಲ. ವರ್ಷಕ್ಕೆ ಕನಿಷ್ಠ ಎರಡು ಮೂರು ಬಾರಿಯಾದರೂ ಸಂಭವಿಸುವ ಭೀಕರ ರೈಲು ದುರಂತಗಳು ಎಂಥವರ ಎದೆಯನ್ನು ನಡುಗಿಸದೇ ಇರದು.

ಇನ್ನು ವಾಯುಯಾನವಂತೂ ಈಚಿನ ದಿನಗಳಲ್ಲಿ ಹತ್ತು ಬಾರಿ ಯೋಚಿಸಿ ಪ್ರಯಾಣಿಸುವಂತಾಗಿದೆ. 200ಕ್ಕೂ ಅಧಿಕ ಪ್ರಯಾಣಿಕರು ಪ್ರಯಾಣಿಸುತ್ತಿದ್ದ ಮಲೇಷ್ಯಾ ಏರ್‌ಲೈನ್ಸ್ ಎಂ.ಎಚ್. 370 ವಿಮಾನ ನಿಗೂಢವಾಗಿ ನಾಪತ್ತೆಯಾದದ್ದು, ಆನಂತರ ಅಪಘಾತಕ್ಕೆ ತುತ್ತಾದ ಸರಣಿ ವಿಮಾನಗಳು ಇಂದಿಗೂ ಬಹುದೊಡ್ಡ ಸವಾಲಾಗಿ ಪರಿಣಮಿಸಿದೆ. ಆದರೆ, ನಾಗರಿಕರಿಗಂತೂ ವಿಮಾನ ಲ್ಯಾಂಡ್ ಆಗುವ ತನಕ ಎದೆಬಡಿತ ತಪ್ಪಿದ್ದಲ್ಲ. ಶಾಲೆಗೆ ತೆರಳಿದ ಮಕ್ಕಳು ಸಹ ಇಂದು ಸುರಕ್ಷಿತವಾಗಿಲ್ಲ. ಹೋಗುವ ವಾಹನದಲ್ಲಿ ಇಲ್ಲವೇ ಪ್ರವಾಸದ ಸಮಯದಲ್ಲಿ ಅಪಘಾತದ ಸಾಧ್ಯತೆಯೇ ಅಧಿಕವಾಗಿರುತ್ತದೆ.

ಮನೆಯಲ್ಲೇ ಇರುವ ಗೃಹಿಣಿಯರೂ ಇಂದು ಸುರಕ್ಷಿತ ಎಂದು ಹೇಳುವಂತಿಲ್ಲ. ಅಡುಗೆ ಅನಿಲ ಸೋರಿಕೆಯಂತೆ ಘಟನೆಗಳು ವಾರಕ್ಕೆ ಮೂರ್ನಾಲ್ಕು ಬಾರಿಯಾದರೂ ವರದಿಯಾಗುತ್ತಲೇ ಇವೆ. ಈಚೆಗಷ್ಟೇ ಬಳ್ಳಾರಿಯ ಕೊಟ್ಟೂರಿನಲ್ಲಿ ಮನೆ ಛಾವಣಿ ಕುಸಿದು ಬಿದ್ದು ಒಂದೇ ಕುಟುಂಬಕ್ಕೆ ಸೇರಿದ ಹಲವರು ಸಾವನ್ನಪ್ಪಿದ್ದಾರೆ. ಇನ್ನು ಋತುಮಾನಕ್ಕೆ ಅನುಗುಣವಾಗಿ





State Bank of India
THE BANKER TO EVERY INDIAN

**ಭಾರತೀಯ ಸ್ಟೇಟ್ ಬ್ಯಾಂಕ್**

## ವೈಯಕ್ತಿಕ ಅಪಘಾತ ವಿಮಾ ಸಂರಕ್ಷಣೆ

**ವರ್ಷಕ್ಕೆ**

**₹ 1,000 ಪಾವತಿಸಿ**

**ಹಾಗೂ**

**₹ 20,00,000**

**ವಿಮಾ ಸಂರಕ್ಷಣೆ ಪಡೆಯಿರಿ**

ಇದು ಕೇವಲ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆ / ಚಾಲ್ತಿ ಖಾತೆ ಹೊಂದಿದವರಿಗೆ ಮಾತ್ರ

**ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 0821 2340914, 9448993014 ಗೆ ಕರೆ ಮಾಡಿ**

ಸಂಭವಿಸುವ ವಿವಿಧ ರೀತಿಯ ಅವಘಡಗಳೂ ಸಾಕಷ್ಟಿವೆ. ಬಿರುಗಾಳಿಗೆ ಸಿಲುಕಿ ಮರದಡಿಯಲ್ಲೇ ಜೀವ ಹಾರಿ ಹೋಗಬಹುದು. ಬಿರು ಸಿಡಿಲಿಗೆ ಒಡಲು ಉರಿದು ಹೋಗಬಹುದು. ಬೆಂಗಳೂರಿನಂತಹ ಊರಿನಲ್ಲಿ ಭೋರ್ಗರೆಯುವ ಚರಂಡಿ ನೀರಿನಲ್ಲಿಯೇ ಮಕ್ಕಳೂ ಸೇರಿದಂತೆ ಹಲವರು ಕೊಚ್ಚಿಕೊಂಡು ಹೋಗಬಹುದು. ಒದ್ದೆಯಾದ ಗೋಡೆಯಲ್ಲೋ ಅಥವಾ ಕಿತ್ತು ಬಿದ್ದ ವಿದ್ಯುತ್ ತಂತಿಯನ್ನೋ ಮುಟ್ಟಿ ವಿದ್ಯುತ್ ಆಘಾತ ಅನುಭವಿಸಬಹುದು.

ಗ್ರಾಮೀಣ ಪ್ರದೇಶದ ರೈತರೂ ಇದಕ್ಕೆ ಹೊರತಾಗಿಲ್ಲ. ಕಾಡುಪ್ರಾಣಿಗಳ ದಾಳಿಗಳು, ಮರಹತ್ತಿ ಕಾಯಿ ಕೀಳುತ್ತಿರುವಾಗ ಆಕಸ್ಮಿಕವಾಗಿ ಬೀಳುವುದು, ಗೋಡೆ ಕುಸಿತ, ಸೇತುವೆ ದಾಟುವಾಗ ನದಿಯ ನೀರಿನ ಹರಿವು ಹೆಚ್ಚಾಗಿ ಕೊಚ್ಚಿಕೊಂಡು ಹೋಗುವುದು, ಹಾವು ಕಚ್ಚುವುದು, ವನ್ಯಜೀವಿಗಳಾದ ಆನೆ, ಚಿರತೆ, ಹುಲಿಗಳು ದಾಳಿ ಇವೇ ಮೊದಲಾದ ಜೀವಭಯದಲ್ಲಿ ಕಾಲದೂಡುವಂತಾಗಿದೆ.

ಇನ್ನು ಎಲ್ಲರ ನಿದ್ದೆಗೆಡಿಸಿರುವುದು ಈಚೆಗೆ ಬೆಂಗಳೂರಿನ ಚರ್ಚ್‌ಸ್ಟ್ರೀಟ್ ಸೇರಿದಂತೆ ಹಲವೆಡೆ ಸಂಭವಿಸಿದ ಬಾಂಬ್ ಸ್ಫೋಟಗಳು. ಇವಂತೂ ಎಲ್ಲಿ, ಹೇಗೆ, ಯಾವ ರೀತಿ ಮತ್ತು ಯಾವಾಗ ಘಟಿಸುತ್ತವೆ ಎಂದು ಹೇಳುವುದಕ್ಕೆ ಆಗುವುದೇ ಇಲ್ಲ. ಈಚೆಗಂತೂ ಇದು ಎಲ್ಲರ ನಿದ್ದೆಗೆಡಿಸಿವೆ. ಒಟ್ಟಾರೆ, ಮೇಲಿನ ಎಲ್ಲಾ ಸಂದರ್ಭಗಳಲ್ಲಿಯೂ ಜೀವ ಹೋದಾಗ ಅವರನ್ನು ನಂಬಿದವರ ರಕ್ಷಣೆಗೆ ಭಾರತೀಯ ಸ್ಟೇಟ್ ಬ್ಯಾಂಕಿನ (ಎಸ್‌ಬಿಐ) ವೈಯಕ್ತಿಕ ಅಪಘಾತ ವಿಮಾ ಸಂರಕ್ಷಣೆ ನೆರವಿಗೆ ಬರುತ್ತದೆ.

ವ್ಯಕ್ತಿ ಮೃತಪಟ್ಟಾಗ ಜೀವವನ್ನು ವಾಪಸ್ ತೆಗೆದುಕೊಂಡು ಬರಲು ಯಾರಿಂದಲೂ ಸಾಧ್ಯವಿಲ್ಲ. ಆದರೆ, ಆತನನ್ನೇ ನೆಚ್ಚಿದವರಿಗೆ ತುಸು ಸಮಾಧಾನವನ್ನು ನೀಡಬಹುದು. ಸಮಾಧಾನ ಎಂದರೆ ಕೇವಲ ಬಾಯ್ಮಾತಿನ ಸಮಾಧಾನ ಅಲ್ಲ. ಕುಟುಂಬದ ಯಜಮಾನ ಮೃತಪಟ್ಟ ನಂತರ ಕುಟುಂಬದ ಆರ್ಥಿಕತೆಯೇ ಮುಗ್ಗರಿಸಿ ಬೀಳುತ್ತದೆ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಕ್ಕುವುದಿಲ್ಲ. ಒಳ್ಳೆಯ ಕಡೆ ಮದುವೆಯಂತೂ ದೂರದ ಮಾತು. ಇಡೀ ಆರ್ಥಿಕತೆಯೇ ದುರ್ಬಲಗೊಂಡು ಕುಟುಂಬ ಜರ್ಜರಿತವಾಗಿಬಿಡುತ್ತದೆ.

ಆದರೆ, ಎಸ್‌ಬಿಐ ಅಪಘಾತ ವಿಮೆ ಇದ್ದರೆ ಕನಿಷ್ಠ ಕುಟುಂಬದ ಆರ್ಥಿಕತೆಗೆ ಊರುಗೋಲಾದರೂ ಆಗುತ್ತದೆ. ಒಂದು ವರ್ಷಕ್ಕೆ ಒಂದು ಸಾವಿರ ಪಾವತಿಸಿದರೆ ಸಾಕು ₹20 ಲಕ್ಷದಷ್ಟು ವಿಮೆ ಸಿಗುತ್ತದೆ. ಒಂದು ವೇಳೆ ವರ್ಷಕ್ಕೆ ಒಂದು ಸಾವಿರ ಆಗದಿದ್ದರೆ ಅತ್ಯಂತ ಕನಿಷ್ಠ ಎಂದರೆ ನೂರು ರೂ ಪಾವತಿಸಿದರೆ ₹ 2 ಲಕ್ಷ, ₹ 200ಕ್ಕೆ ₹4 ಲಕ್ಷ, ₹ 500 ಪಾವತಿಸಿದರೆ ₹ 10 ಲಕ್ಷ ವಿಮೆ ಸಿಗುತ್ತದೆ. ಇದಕ್ಕೆ 18ರಿಂದ 65 ವರ್ಷದೊಳಗಿನ ವ್ಯಕ್ತಿಗಳು ಮಾತ್ರ ಅರ್ಹರು. ಆದರೆ, ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಖಾತೆ ಹೊಂದಿರುವುದು ಕಡ್ಡಾಯ.

**ಕರ್ನಾಟಕ ರಾಜ್ಯವೊಂದರಲ್ಲಿಯೇ ಈವರೆಗೆ 168 ಕ್ಲೇಮ್‌ಗಳನ್ನು ಬಗೆಹರಿಸಿ ₹ 6.57 ಕೋಟಿಗಳನ್ನು ವಿಮೆದಾರರ ವಾರಸುದಾರರಿಗೆ ನೀಡಲಾಗಿದೆ.**

ವಿಮೆ ಯೋಜನೆ ಕುರಿತು ಹೆಚ್ಚಿನ ಮಾಹಿತಿಗೆ ಮೊ: 94489 93014 ಅಥವಾ 0821– 2340914 ಸಂಪರ್ಕಿಸಿ.

| ಪ್ರೀಮಿಯಂ | ಪರಿಹಾರ |
|---|---|
| ರೂ. 100 | 2,00,000 |
| ರೂ. 200 | 4,00,000 |
| ರೂ. 500 | 10,00,000 |
| ರೂ. 1000 | 20,00,000 |

